ಬಸವಕಲ್ಯಾಣ ಮತಕ್ಷೇತ್ರಕ್ಕೆ ಹೊಂದಿಕೊಂಡಿರುರ ಗಡಿ ಭಾಗದಲ್ಲಿರುವ ಭಾಷಾ ಅಲ್ಪಸಂಖ್ಯಾತರಿಗೆ ಶಿಕ್ಷಣ ಸೌಲಭ್ಯ ಒದಗಿಸುವುದು

2580 (2954) ಶ್ರೀ ಎಂ.ಜಿ ಮುಳೆ (ಬಸವಕಲ್ಯಾಣ) :— ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬಸವಕಲ್ಯಾಣ ಮತಕ್ಷೇತ್ರದಲ್ಲಿ ಗಡಿ ಭಾಗಕ್ಕೆ ಹೊಂದಿಕೊಂಡಿರುವ ಗ್ರಾಮಗಳಲ್ಲಿ ಅವಶ್ಯಕತೆ ಇರುವ ಮರಾಠಿ ಮಾಧ್ಯಮದ ಶಾಲೆಗಳ ಸಂಖ್ಯೆ ಎಷ್ಟು ;

ಆ) ಇಲ್ಲಿಯವರೆಗೆ ಎಷ್ಟು ಶಾಲೆಗಳು ಮಂಜೂರಿ ಆಗಿವೆ; ಎಷ್ಟು ಶಾಲೆಗಳು ಕಾರ್ಯ ರೂಪದಲ್ಲಿವೆ; ಎಷ್ಟು ಶಾಲೆಗಳ ಅವಶ್ಯಕತೆ ಇದೆ; (ಗ್ರಾಮವಾರು ವಿವರ ನೀಡುವುದು)

ಇ) ಮರಾಠಿ ಭಾಷಾ ಅಲ್ಪಸಂಖ್ಯಾತರ ಶಾಲೆಗಳನ್ನು ತೆರೆಯಲು ಕೈಗೊಂಡಿರುವ ಕ್ರಮವೇನು;

ಈ) ಈ ಶೈಕ್ಷಣಿಕ ವರ್ಷದಲ್ಲಿ ಎಷ್ಟು ಶಾಲೆಗಳನ್ನು ಮಂಜೂರು ಮಾಡಲು ಉದ್ದೇಶಿಸಿದೆ?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :—

ಅ) ಅವಶ್ಯಕತೆ ಇರುವ ಮರಾಠಿ ಶಾಲೆಗಳು 46

ಆ) 46 ಶಾಲೆಗಳು ಮಂಜೂರಾಗಿದ್ದು ಈ ಎಲ್ಲಾ ಶಾಲೆಗಳು ಕಾರ್ಯ ನಿರ್ವಹಿಸುತ್ತಿವೆ. ಗಡಿ ಭಾಗದ ಎಲ್ಲಾ ಕಂದಾಯ ಗ್ರಾಮಗಳಲ್ಲಿ 300 ಜನಸಂಖ್ಯೆ ಹೊಂದಿರುವ ಕನಿಷ್ಠ 20 ಮಕ್ಕಳು ಲಭ್ಯವಿರುವ ಗ್ರಾಮಗಳಲ್ಲಿ ಶಾಲೆಗಳಿವೆ.

ಇ) ಈ ಬಗ್ಗೆ ಪರಿಶೀಲಿಸಿ ಅಗತ್ಯತೆ ಇದ್ದಲ್ಲಿ ಶಾಲೆಗಳನ್ನು ತೆರೆಯಲಾಗುವುದು.

ಈ) 1) ವಿವಿದೋದ್ದೇಶ ಯೋಜನೆಯಲ್ಲಿ 13 ಉರ್ದು ಶಾಲೆಗಳನ್ನು ತೆರೆಯಲು ಆದೇಶಿಸಲಾಗಿದೆ.

2) 2001-02ನೇ ಸಾಲಿನಲ್ಲಿ ಬಸವಕಲ್ಯಾಣ ತಾಲ್ಲೂಕು ಮಂಠಾಳಾ ಗ್ರಾಮದಲ್ಲಿ ಸರ್ಕಾರಿ ಉರ್ದು ಪ್ರಾಥಮಿಕ ಮತ್ತು ಸ್ಯಾಪುರದಲ್ಲಿ ಕನ್ನಡ ಮಾಧ್ಯಮದ ಪ್ರೌಢಶಾಲೆಗೆ ಮಂಜೂರಾತಿ ನೀಡಿದೆ.